**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No.160/2018**

**R.W.1.**

ದಿನಾಂಕಃ **09.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಖ್ಯ ವಿಚಾರಣೆ ಎದುರುದಾರರ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ**.** ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ**.**

<u>ಪಾಟೀ ಸವಾಲು ಅರ್ಜಿದಾರರ ಪರ ವಕೀಲರಿಂದಃ**-**</u>

ಕುಚ್ಚಂಗಿ ಗ್ರಾಮ ಊರುಕೆರೆಗೆ ಹೊಂದಿಕೊಂಡಂತೆ ಇರುತ್ತದೆ ಅಂದರೆ ಸರಿ . ಸದರಿ ಊರ್ ಕೆರೆ ನಗರ ವ್ಯಾಪ್ತಿಗೆ ಹೊಂದಿಕೊಂಡಂತೆ ಇದೆ ಅಂದರೆ ಸರಿ. ಕುಚ್ಚಂಗಿ ಗ್ರಾಮ ದ ಸರ್ವೇ ನಂ. 128 ರಲ್ಲಿ 24 ಗುಂಟೆ ಸ್ವಾಧೀನಪಡಿಸಿಕೊಂಡಿದ್ದೀರಿ ಅಂದರೆ ಸರಿ. 24 ಗುಂಟೆ ಜಮೀನು ನಗರ ಪ್ರದೇಶದ ವ್ಯಾಪ್ತಿಗೆ ಸಮೀಪವಿರುವುದರಿಂದ ಸದರಿ ಜಮೀನಿನ ಬೆಲೆ ಹೆಚ್ಚಾಗಿ ಇರುತ್ತದೆ ಅಂದರೆ ಸರಿಯಲ್ಲ. ನಗರ ವ್ಯಾಪ್ತಿಗೆ ಸಮೀಪದಲ್ಲಿ ಇದ್ದರು ಸಹ ಹೆಚ್ಚಿನ ಪರಿಹಾರ ಕೊಡದೇ ಕಡಿಮೆ ಪರಿಹಾರ ಕೊಟ್ಟಿದ್ದೀರಿ ಅಂದರೆ ಸರಿಯಲ್ಲ. ಸರ್ವೇ ನಂ. 128 ರಲ್ಲಿ ಪೂರ್ತಿ ಮಾವಿನ ಮರಗಳು ಇದ್ದವು ಅಂದರೆ ಸರಿಯಲ್ಲ. ಮಾವಿನ ಮರಗಳ ಭವಿಷ್ಯತ್ತಿನ

ಪರಿಹಾರವನ್ನು ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಈ ಪ್ರಕ್ರಿಯೆಯಲ್ಲಿ ತಾವು ಸಹ ಭಾಗಿಯಾಗಿರುವುದರಿಂದ ಹೆಚ್ಚಿನ ಪರಿಹಾರ ಕೊಡಲು ತಾವು ಭಾದ್ಯಸ್ಥ.ರು ಅಂದರೆ ಸರಿಯಲ್ಲ. ತುಮಕೂರು ನಗರವನ್ನು ಸ್ಮಾರ್ಟ್ ಸಿಟಿ ಎಂದು ಪರಿಗಣಿಸಿದ್ದಾರೆ ಅಂದರೆ ಸರಿ. ನಗರ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಹೆಚ್ಚಿನ ಪರಿಹಾರ ಕೊಡಲು ಭಾದ್ಯಸ್ಥರು ಇದ್ದು ಕಡಿಮೆ ಪರಿಹಾರಕೊಟ್ಟಿದ್ದೀರಿ ಅಂದರೆ ಸರಿಯಲ್ಲ. ದಿ 28-01-18 ರಂದು ಅವಾರ್ಡ್ ನೋಟೀಸ್ ಜಾರಿ ಮಾಡಲಾಗಿದೆ ಅಂದರೆ ಸರಿ. ಅರ್ಜಿದಾರರು ದಿ 29-02-18 ರಂದು ಹೆಚ್ಚಿನ ಪರಿಹಾ ರಕೋರಿ ಅರ್ಜಿ ಸಲ್ಲಿಸಿರುತ್ತಾರೆ ಅಂದರೆ ಸರಿ. ಆದ್ದರಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿ 6 ತಿಂಗಳ ಒಳಗೆ ಇದೆ ಅಂದರೆ ಅದು 1 ನೇ ಪ್ರತಿವಾದಿಗೆ ಸಂಬಂಪಟ್ಟದು ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಅರ್ಜಿಯು ಕಾಲಮಿತಿಯ ಪರಿಮಿತಿಯ ಒಳಗೆ ಇರುತ್ತದೆ ಅಂದರೆ ಸಾಕ್ಷಿಯು 1 ನೇ ಪ್ರತಿವಾದಿಗೆ ಸಂಬಂದಪಟ್ಟದ್ದು ಎಂದು ನುಡಿಯುತ್ತಾರೆ. ತಾವು ಕಡಿಮೆ ಪರಿಹಾರವನ್ನು ನೀಡಿದ್ದು ಹೆಚ್ಚಿನ ಪರಿಹಾರವನ್ನು ತಾವು ಕೊಡಲು ಭಾದ್ಯಸ್ಥರಿದ್ದೀರಿ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ-

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು